**ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ**

ಸಂಖ್ಯೆ: ಡಿಟಿಇ 12 ಡಿಇಕ್ಯೂ(1) 2014 ದಿನಾಂಕ: 15/09/2015

**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಛೇರಿಯ ನಡವಳಿಗಳು**

**ವಿಷಯ:** ಶ್ರೀ. ಶ್ರೀ.ಎಂ.ಎಸ್.ಮಾದೇಗೌಡ, ಬೋದಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು, ಇವರ ಅನಧಿಕೃತ ಗೈರು ಹಾಜರಿ ಕುರಿತು ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**
1) ವರ್ಗಾವಣೆ ಆದೇಶ ಪತ್ರ ಸಂ:ಡಿಟಿಇ 5 ಇಎಸ್‌ಟಿ(5)2012, ದಿನಾಂಕ: 15.06.2012
2) ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇವರು ನಿರ್ದೇಶಕರಿಗೆ ಬರೆದ ಪತ್ರ ದಿನಾಂಕ: 26/02/2015
3) ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇವರು ನಿರ್ದೇಶಕರಿಗೆ ಬರೆದ ಪತ್ರ ದಿನಾಂಕ: 07/01/2012, 07/05/2012
4) ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇವರು ಕಾರ್ಯವಿಮುಕ್ತಿಗೊಳಿಸಿರುವ ಪತ್ರ ದಿನಾಂಕ: 22/06/2012.
5) ಶ್ರೀ.ಎಂ.ಎಸ್.ಮಾದೇಗೌಡ ಇವರು ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇವರಿಗೆ ಬರೆದ ಮನವಿ ಪತ್ರ ದಿನಾಂಕ: 25/02/2015.
6) ದೋಷಾರೋಪಣ ಪಟ್ಟಿ ಪತ್ರ ದಿನಾಂಕ:16/04/2015.
7) ನ್ಯಾಯಾಧಿಶರನ್ನು ನೇಮಿಸಿಲಾದ ದಿನಾಂಕ:15/05/2015.
8) ವಿಚಾರಣಾಧಿಕಾರಿಗಳ ಅಂತಿಮ ವರದಿ ದಿನಾಂಕ: 29/07/2015.
9) 2ನೇ ಕಾರಣ ಕೇಳುವ ನೋಟಿಸ್ ದಿನಾಂಕ:01/08/2015.
10) ಶ್ರೀ.ಎಂ.ಎಸ್. ಮಾದೇಗೌಡ ಇವರ ಸಮಾಜಾಯಿಷಿ ಪತ್ರ ದಿನಾಂಕ; 20/08/2015.

**********

**ಪ್ರಸ್ತಾವನೆ;**

ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು, ಇಲ್ಲಿ ಬೋಧಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ **ಶ್ರೀ.ಎಂ.ಎಸ್.ಮಾದೇಗೌಡ,** ಇವರು ನಿರ್ದೇಶಕರ ಅಧಿಕೃತ ಜ್ಞಾಪನ ಸಂ: ಡಿಟಿಇ/05/ಇಎಸ್‌ಟಿ(5)/2012, ದಿನಾಂಕ:15/06/2012ರ ಆದೇಶದಂತೆ, ಸಾರ್ವಜನಿಕ ಹಿತದೃಷ್ಟಿಯ ಮೇರೆಗೆ ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇಲ್ಲಿನ ಖಾಲಿ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು. ಸದರಿ ಆದೇಶದನ್ವಯ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇವರು ದಿನಾಂಕ:23/06/2012ರ ಅಪರಾಹ್ನ ಸಂಸ್ಥೆಯಿಂದ ಕಾರ್ಯವಿಮುಕ್ತಿಗೊಳಿಸಿರುತ್ತಾರೆ. ಆದರೆ ಸದರಿಯವರು ನಿರ್ದೇಶಕರ ವರ್ಗಾವಣೆ ಆದೇಶವನ್ನು ಪಾಲಿಸದೇ ಕಾರ್ಯವಿಮುಕ್ತಿಗೊಳಿಸಿದ ದಿನಾಂಕದಿಂದ 10/04/2015ರವರೆಗೂ ಸುಮಾರು 2 ವರ್ಷ 8 ತಿಂಗಳು ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಈ ಬಗ್ಗೆ ಪ್ರಿನ್ಸಿಪಾಲರು ನಿರ್ದೇಶಕರಿಗೆ ಬರೆದ ಪತ್ರದ ಅನುಸಾರ ಅವರ ಗೈರುಹಾಜರಿ ವಿರುದ್ಧ ದಿನಾಂಕ:16/04/2015ರಂದು ದೋಷಾರೋಪಣ ಪಟ್ಟಿ ಜಾರಿಮಾಡಿ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿತ್ತು. ಸದರಿ ನೋಟೀಸ್‌ನ್ನು ಸ್ವೀಕರಿಸಿಕೊಂಡ ಅವರು ಯಾವುದೇ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿದೆ ಕರ್ತವ್ಯ ನಿರ್ಲಕ್ಷ್ಯತೆ ತೋರಿ ಒಬ್ಬ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ, ಮೇಲಾಧಿಕಾರಿಗಳ ಆದೇಶವನ್ನು ತಿರಸ್ಕರಿಸಿ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಹಾಗೂ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯನ್ನುಂಟು ಮಾಡಿ ಧೀರ್ಘಾವಧಿ ಅನಧಿಕೃತ ಗೈರುಹಾಜರಾಗಿ ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಮತ್ತು ಪ್ರಾಮಾಣಿಕತೆ ತೋರುವುದರಲ್ಲಿ ವಿಫಲರಾಗಿ ಕರ್ನಾಟಕ ನಾಗರೀಕ ಸೇವಾ ನಡತೆ(ವರ್ತನೆ) ನಿಯಮಗಳು 1966ರ ನಿಯಮ 3(1)ರ ಉಪನಿಯಮ (i) (ii) ಮತ್ತು (iii)ನ್ನು ಉಲ್ಲಂಘಿಸಿರುವ ಆರೋಪದ ಮೇರೆಗೆ ಶಿಸ್ತು ಪ್ರಾಧಿಕಾರವು ನಿಯಮಾನುಸಾರ ಪೂರ್ಣಾವಧಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ಶ್ರೀ.ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ದಿನಾಂಕ: 15/05/2015ರಲ್ಲಿ ನೇಮಿಸಲಾಯಿತು. ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ದಿನಾಂಕ:29/07/2015ರಂದು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅವಲೋಕಿಸಿದಾಗ ವರದಿಯಲ್ಲಿ ಆಪಾದಿತರು 2 ವರ್ಷ 8 ತಿಂಗಳವರೆಗೂ ಅನಧಿಕೃತ ಗೈರುಹಾಜರಾಗಿದ್ದು, ಒಬ್ಬ ಸರ್ಕಾರಿ ನೌಕರರಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಸರ್ಕಾರಿ ನೌಕರನ ನಡತೆ ನಿಯಮಗಳು 1966ರ ನಿಯಮ 3(1)ರ ಉಪನಿಯಮ (i) (ii) ಮತ್ತು (iii)ನ್ನು ಉಲ್ಲಂಘಿಸಿ, ಅವಿಧೇಯತೆಯಿಂದ ನಡೆದುಕೊಂಡಿರುವುದು ಕಂಡುಬರುತ್ತದೆ. ಮೇಲೆ ಹೇಳಿದ ಎಲ್ಲಾ ಕಾರಣಗಳಿಂದಾಗಿ ಹಾಗೂ ಉಭಯ ಪಾರ್ಟಿಗಳ ಸಾಕ್ಷ್ಯಾಧಾರಗಳನ್ನು, ದಾಖಲಾತಿಗಳನ್ನು ಪರಿಶೀಲಿಸಿ ನನ್ನ ಅಭಿಪ್ರಾಯದಲ್ಲಿ ಆಪಾದಿತರ ವಿರುದ್ಧ ಹೊರಿಸಿರುವ ಆರೋಪಗಳು ರುಜುವಾತಾಗಿದೆ ಎಂದು ಅಂತಿಮ ವರದಿಯಲ್ಲಿ ತಿಳಿಸಿರುತ್ತಾರೆ. ಇಲಾಖಾ ವಿಚಾರಣ ಅಂತಿಮ ವರದಿಯನ್ನು ಲಗತ್ತಿಸಿ 2ನೇ ಕಾರಣ ಕೇಳುವ ನೋಟಿಸ್

ಮೂಲಕ ನಿಯಮಾನುಸಾರ 30 ದಿವಸಗಳ ಕಾಲವಕಾಶ ನೀಡಿ ಆರೋಪಿತರ ಲಿಖಿತ ರಕ್ಷಣಾತ್ಮಕ ಹೇಳಿಕೆಯನ್ನು ಸಲ್ಲಿಸಲು ತಿಳಿಸಲಾಗಿತ್ತು. ಅದರಂತೆ ಸದರಿಯವರು ದಿನಾಂಕ: 20/08/2015 ರಂದು ಅವರ ಲಿಖಿತ ಸಮಾಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಾಜಾಯಿಷಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಸದರಿಯವರ ಮಕ್ಕಳಿಗೆ ಶಾಲೆಗೆ ಸೇರಿಸಲು ಹಣಕಾಸಿನ ತೊಂದರೆ ಇದ್ದರಿಂದ ಮನಸ್ಸಿಗೆ ಬಹಳ ಬೇಸರವಾಗಿ ವರ್ಗಾವಣೆಯಾದ ಸ್ಥಳದಲ್ಲಿ ಕೆಲಸಕ್ಕೆ ವರದಿ ಮಾಡಿಕೊಳ್ಳಲು ಸಾಧ್ಯವಾಗಲ್ಲಿ ಎಂಬ ಸಮಾಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಇದನ್ನು ಗಮನಿಸಿದಾಗ ಅವರ ಗೈರು ಹಾಜರಿಯ ಆರೋಪವನ್ನು ಅವರೆ ಒಪ್ಪಿಕೊಂಡಿರುತ್ತಾರೆ. ಅದ್ದರಿಂದ ಸದರಿಯವರ ಮೇಲಿನ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ವಿಚಾರಣಾಧಿಕಾರಿಗಳ ಅಂತಿಮ ವರದಿಯನ್ನು ಅಂಗೀಕರಿಸಿ ಈ ಕೆಳಕಂಡಂತೆ ದಂಡನೆ ವಿಧಿಸಿ ಆದೇಶಿಸಿದೆ.

**ನಿರ್ದೇಶಕರ ಆದೇಶ ಸಂಖ್ಯೆ: ಡಿಟಿಇ 12 ಡಿಇಕ್ಯೂ(1) 2014**
**ದಿನಾಂಕ: 6ನೇ ಅಕ್ಟೋಬರ್ 2015**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳಿಂದಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 8(vi) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ (ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು, ಇಲ್ಲಿಂದ ವರ್ಗಾವಣೆಯಾಗಿ ಕಾರ್ಯವರದಿ ಮಾಡದೆ ಇವರುವ) ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಎಂ.ಎಸ್.ಮಾದೇಗೌಡ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ **ಸರ್ಕಾರಿ ಸೇವೆಯಿಂದ ಈ ಮೂಲಕ ಕಡ್ಡಾಯ ನಿವೃತ್ತಿಗೊಳಿಸಿದೆ.** ಸದರಿಯವರ ಗೈರು ಹಾಜರಾದ ಅವಧಿಯನ್ನು ಕೆಲಸ ಮಾಡದ ದಿನಗಳೆಂದು (Dies non) ಎಂದು ಪರಿಗಣಿಸಿ ಆದೇಶಿಸಲಾಗಿದೆ.

**ನಿರ್ದೇಶಕರು**
**ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ,**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**

ಇವರಿಗೆ,

1) ಶ್ರೀ. ಎಂ.ಎಸ್.ಮಾದೇಗೌಡ, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. (ಪ್ರಿನ್ಸಿಪಾಲರ ಮುಖಾಂತರ).
2) ಪ್ರಿನ್ಸಿಪಾಲರ, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. (ಸದರಿ ಆದೇಶವನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ಅವರ ಸ್ವ ವಿಳಾಸಕ್ಕೆ ಜಾರಿ ಮಾಡಿ ವರದಿಯನ್ನು ಈ ಕಛೇರಿಗೆ ಕಳುಹಿಸುವ ಸಲುವಾಗಿ. ಮತ್ತು ಸದರಿಯವರನ್ನು ಕಡ್ಡಾಯ ನಿವೃತ್ತಿಗೊಳಿಸಿರುವ ಪ್ರಯುಕ್ತ ಕೂಡಲೇ ಇವರನ್ನು ಕಾರ್ಯವಿಮುಕ್ತಿಗೊಳಿಸಲು ಸೂಕ್ತ ಕ್ರಮ ಕೈಗೊಂಡು ವರದಿ ಕಳುಹಿಸುವುದು)
3) ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವುದು.

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ**

1) ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
4) ನಿರ್ದೇಶಕರು, ಉಪಖಜಾನೆ, ಚಿಂತಾಮಣಿ.
5) ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು
6) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
7) ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8) ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
9) ಪ್ರಿನ್ಸಿಪಾಲರ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು.
10) ನಿರ್ದೇಶನಾಲಯದ ಆಪ್ತ ಶಾಖೆಗೆ.
11) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
12) ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಸದರಿ ಆದೇಶವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
13) ಇಎಸ್‌ಟಿ(3), ಇಎಸ್‌ಟಿ(7),ಇಎಸ್‌ಟಿ8(ಬಿ), ಮತ್ತು ಇಎಸ್‌ಟಿ(9) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

Nadavali